**2 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃಗೋಕಾಕ**

**ಸಿ.ಸಿ ನಂ. 841/2020**

ದಿಃ **14-08-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಚಾ.ಸಾ-1 ಪ್ರಾ.ಸಾ-3

| | | |
|---|---|---|
| ಹೆಸರು | : | ಶ್ರೀಧರ ನಾಗಲಿಂಗರಾವ ಘೋರ್ಪಡೆ |
| ತಂದೆ ಹೆಸರು | : | ನಾಗಲಿಂಗರಾವ ಘೋರ್ಪಡೆ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ಅಬಕಾರಿ ಉಪನಿರೀಕ್ಷಕರು |
| ವಾಸಸ್ಥಳ | : | ಹೊಸಪೇಟೆ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ದಿಃ 14-11-2019 ರಿಂದ 13-12-2019 ರವರೆಗೆ ಅಬಕಾರಿ ಉಪನಿರೀಕ್ಷಕರಾಗಿ ಗೋಕಾಕ ವಲಯದಲ್ಲಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

1) ದಿಃ 19-11-2019 ರಂದು ಬೆಳಿಗ್ಗೆ 10-35 ಗಂಟೆಗೆ ಅಬಕಾರಿ ಜಂಟಿ ಆಯುಕ್ತರು ಬೆಳಗಾವಿ, ಅಬಕಾರಿ ಉಪಆಯುಕ್ತರು ಬೆಳಗಾವಿ ರವರ ನಿರ್ದೇಶನದಂತೆ ಹಾಗೂ ಅಬಕಾರಿ ಉಪಅಧೀಕ್ಷಕರು ರಾಮದುರ್ಗ ಉಪವಿಭಾಗರವರ ಮಾರ್ಗದರ್ಶನದಲ್ಲಿ ಅಬಕಾರಿ ನಿರೀಕ್ಷಕರು ಗೋಕಾಕ ವಲಯ ಹಾಗೂ ಅಬಕಾರಿ ನಿರೀಕ್ಷಕರು ರಾಮದುರ್ಗ ಉಪವಿಭಾಗ ರವರೊಂದಿಗೆ ನಾನು ಹಾಗೂ ನಮ್ಮ ಸಿಬ್ಬಂದಿ, ಸ್ಥಳೀಯ ಪಂಚರೊಂದಿಗೆ ಕೂಡಿಕೊಂಡು ಗೋಕಾಕ ವಿಧಾನ ಸಭಾ 2019 ರ ಪ್ರಯುಕ್ತ ಗಸ್ತು ಕಾರ್ಯ ನಿರ್ವಹಿಸುತಿದ್ದಾಗ ಗೋಕಾಕ ನಗರದ ಗೋಕಾಕದಿಂದ ಮೆಳವಂಕಿ ಗ್ರಾಮಕ್ಕೆ ಹೋಗುವ ನಾಕಾ ನಂ.1 ರ ಹತ್ತಿರ ಹಳೆಯ ಆರ ಟಿ ಒ ಕಚೇರಿಯ

ಮುಂಭಾಗದಲ್ಲಿ ಒಬ್ಬ ಆಸಾಮಿಯು ದ್ವಿಚಕ್ರವಾಹನ ಎಡ ಮತ್ತು ಬಲಬಾಗದಲ್ಲಿ ಬಟ್ಟೆ ಚೀಲವನ್ನು ಇಟ್ಟು ಕೊಂಡು ಸಾಗಾಣಿಕೆ ಮಾಡುತಿದ್ದು.

ನಾವು ಸಂಶಯ ಬಂದು ನಮ್ಮ ವಾಹನವನ್ನು ನಿಲ್ಲಿಸಿದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಆ ವ್ಯಕ್ತಿಯು ಚೀಲಗಳನ್ನು ಸ್ಥಳದಲ್ಲಿಯೇ ಬಿಟ್ಟು ಆರ ಟಿ ಒ ಕಚೇರಿಯ ಹಿಂಭಾಗದ ಹೊಲದ ಗಿಡಗಂಟಿಗಳಲ್ಲಿ ಓಡಿ ಹೋಗಿ ಪರಾರಿಯಾಗಿರುತ್ತಾನೆ. ನಂತರ ಸಂಶಯಗೊಂಡು ವಾಹನ ಮತ್ತು ಚೀಲಗಳನ್ನು ಶೋಧಿಸಲು ನಿರ್ದರಿಸಿ ನ್ಯಾಯಾಲಯದಿಂದ ಶೋಧನಾ ವಾರಂಟ ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದ ಕಾರಣ ಪಂಚರಿಗೆ ಹಾಗೂ ಇಲಾಖಾ ಸಿಬ್ಬಂದಿಗಳಿಗೆ ತಿಳಿಸಿ ಶೋಧನಾ ಸಮುಚಿತ ವರದಿಯನ್ನು ಸ್ಥಳದಲ್ಲಿಯೇ ತಯಾರಿಸಿ ಪಂಚರಿಗೆ ನಮ್ಮ ಅಂಗಜಡತಿ ಕೊಟ್ಟು ದ್ವಿಚಕ್ರವಾಹನವನ್ನು ಶೋಧನೆ ಮಾಡಿದೆವು.

ಸದರಿ ದ್ವಿಚಕ್ರವಾಹನ ಎಡ ಮತ್ತು ಬಲಭಾಗದಲ್ಲಿದ್ದ ಹುಕ್ಕುಗಳಿಗೆ ನೇತುಹಾಕಿದ ಎರಡು ಬಟ್ಟೆ ಚೀಲಗಳನ್ನು ತೆಗೆದು ನೋಡಲಾಗಿ ಒಂದು ಬಿಳಿ ಬಣ್ಣದ ಸ್ಟಾರ ಎಂದು ನಮೂದಿಸಿರುವ ಬಟ್ಟೆ ಚೀಲದಲ್ಲಿ ಬೆಂಗಳೂರು ಮಾಲ್ಟ ವಿಸ್ಕಿ ಎಂದು ನಮೂದುವುಳ್ಳ ಎರಡು ರಟ್ಟಿನ ಪೆಟ್ಟಿಗಿಗಳಲ್ಲಿ 2 x 90 ಎಂ.ಎಲ. X 192 = 17.280 ಲೀಟರ ಮದ್ಯ ಇದ್ದು ಹಾಗೂ ಓರಿಜನಲ ಚಾಯ್ಸ ವಿಸ್ಕಿ ಎಂದು ನಮೂದುವುಳ್ಳ ಎರಡು ರಟ್ಟಿನ ಪೆಟ್ಟಿಗೆಗಳಲ್ಲಿ 2 x 90 ಎಂ.ಎಲ. X 192 = 17.280 ಲೀಟರ ಮದ್ಯ ಇರುವದು ಕಂಡು ಬಂದಿತು. ಸದರಿ ವಾಹನವನ್ನು ಪರಿಶೀಲಿಸಲಾಗಿ ನೊಂದಣಿ ಸಂಃಕೆಎ-27 ಎಲ 9649 ಕಪ್ಪು-ಸಿಲ್ವರ ಬಣ್ಣದ ಹಿರೋ ಹೊಂಡಾ ಸ್ಲೇಂಡರ ಪ್ಲಸ್ ದ್ವಿಚಕ್ರ ವಾಹನ ಇರುವದು ಕಂಡು ಬಂದಿತು. ಸದರಿ ವಾಹನದ ಚಸ್ಸಿ ಸಂಃ 06J16F03947, ಇಂಜಿನ ಸಂಃ 06J15E04866 ಇರುವದು ಕಂಡು ಬಂದಿತು.

ಸದರಿ ವ್ಯಕ್ತಿಯು ಮದ್ಯವನ್ನು ಅಕ್ರಮವಾಗಿ ಸಾಗಾಣಿಕ ಮಾಡುತ್ತಿರುವದು ಕಂಡು

ಬಂದಿತು . ಜಪ್ತಿಪಡಿಸಿದ ಮುದ್ದೆ ಮಾಲಿನ ಪೈಕಿ 16 x 90 ಎಂ.ಎಲ. 1.440 ಲೀಟರ ಬೆಂಗಳೂರು ಮಾಲ್ಟ ವಿಸ್ಕಿ ಟೆಟ್ರಾ ಪ್ಯಾಕಗಳು ಹಾಗೂ 16 x 90 ಎಂ.ಎಲ. 1.440 ಲೀಟರ ಓರಿಜಿನಲ ಚಾಯ್ಸ ವಿಸ್ಕಿ ಟೆಟ್ರಾ ಪ್ಯಾಕಗಳನ್ನು ರಸಾಯನಿಕ ಪರೀಕ್ಷೆಗೊಸ್ಕರ ಮಾದರಿ ತೆಗೆಯಲಾಯಿತು. ಪಂಚನಾಮೆಯ ಪ್ರಕಾರ ಮುದ್ದೆ ಮಾಲು ಹಾಗೂ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆಯಲಾಯಿತು. ನಂತರ ಠಾಣೆಗೆ ಹಾಜರಾಗಿ ದೂರನ್ನು ಸಲ್ಲಿಸಿದೆನು. ಸ್ಯಾಂಪಲ ಪಡೆದ ಮುದ್ದೆ ಮಾಲನ್ನು ರಸಾಯನಿಕ ಪರೀಕ್ಷೆಗಾಗಿ ಚಾಸಾ-4 ರವರ ಕಳುಹಿಸಿದೆನು. ಮುಂದಿನ ತನಿಖೆಗಾಗಿ ಚಾಸಾ-7 ರವರಿಗೆ ಈ ಪ್ರಕರಣದ ಕಡತವನ್ನು ಹಸ್ತಾಂತರಿಸಿದೆನು.

ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದೂರನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಶೋಧನಾ ಸಮುಚಿತ ವಾರಂಟನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರ.ವ.ವ. ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ 11-12-2019 ರ ರಸಾಯನಿಕ ವಿಶ್ಲೇಷಕರು ಧಾರವಾಡ ರವರಿಗೆ ಬರೆದ ಪತ್ರವನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಚೀಲವನ್ನು ತೋರಿಸಲಾಗಿ ಸದರಿ ಚೀಲದಲ್ಲಿ ಬೆಂಗಳೂರು ಮಾಲ್ಟ ವಿಸ್ಕಿ ಹಾಗೂ ಓರಿಜಿನಲ ಚಾಯ್ಸ ವಿಸ್ಕಿಯ ಟೆಟ್ರಾ ಪೌಚಗಳು ಇದ್ದು ಸದರಿ ಚೀಲವನ್ನು ನಿಶಾನೆಗೊಳಿಸಲು ಆರೋಪಿ ಪರ ವಕೀಲರು

ತಕರಾರುಪಡಿಸಿರುತ್ತಾರೆ.

ಆರೋಪಿ ಪರ ವಕೀಲರು ಸದರಿ ಟೆಟ್ರಾ ಪ್ಯಾಕಗಳು ಖಾಲಿ ಇದ್ದು ಅವುಗಳಲ್ಲಿ ಮದ್ಯ ಇರುವುದಿಲ್ಲಾ ಆದಕಾರಣದಿಂದ ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಲಾಗುವುದಿಲ್ಲಾ ಎಂದು ಹೇಳಿರುತ್ತಾರೆ. ಸ.ಸ.ಅ ರವರು ಸದರಿ ಜಪ್ತಾದ ಮದ್ಯದ ಟೆಟ್ರಾ ಪ್ಯಾಕುಗಳನ್ನು ನಿಶಾನೆಗೊಳಿಸಲು ಕೋರಿರುತ್ತಾರೆ. ಇಬ್ಬರ ವಾದವನ್ನು ಆಲಿಸಲಾಯಿತು. ಈ ಹಂತದಲ್ಲಿ ಆರೋಪಿ ಪರ ವಕೀಲರು ಸಲ್ಲಿಸಿರುವ ತಕರಾರನ್ನು ಅಲ್ಲಗಳೆದು ಸದರಿ ಚೀಲವನ್ನು ಮು.ಮಾ.-1 ಎಂದು ನಿಶಾನೆಗೊಳಿಸಲಾಯಿತು. ಆರೋಪಿಗೆ ನೋಡಿದರೆ ಗುರುತಿಸಲಾಗುವುದಿಲ್ಲಾ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಆರ. ಎಸ. ಎನ. ವಕೀಲರಿಂದ</u>**

1) ಮುದ್ದೆ ಮಾಲು-1 ರಲ್ಲಿರುವ ಖಾಲಿ ಸರಾಯಿ ಟೆಟ್ರಾ ಪ್ಯಾಕೇಟಗಳ ಅನ್ವಯ ನಿಮಗೆ ದೂರು ದಾಖಲಿಸಲು ಯಾವದೇ ಅಧಿಕಾರ ಇರುವುದಿಲ್ಲಾ ಎಂದರೆ ಸಾಕ್ಷಿಯು ಸದರಿ ಮುದ್ದೆ ಮಾಲು-1 ರಲ್ಲಿರುವ ಸಾರಾಯಿ ಪ್ಯಾಕೇಟಗಳನ್ನು ಜಪ್ತಿಪಡಿಸಿಕೊಂಡಾಗ ಅವುಗಳು ತುಂಬಿದ್ದವು ನಂತರ ಸದರಿ ಪ್ಯಾಕೇಟಗಳನ್ನು ರಾಸಾಯನಿಕ ಪರೀಕ್ಷಗೆ ಕಳುಹಿಸಲಾಯಿತು ಎನ್ನುತ್ತಾರೆ.

2) ನಾವು ಜಪ್ತಿಪಡಿಸಿಕೊಂಡಾಗ ನಾಲ್ಕು ರಟ್ಟಿನ ಬಾಕ್ಸಗಳ ಪೈಕಿ ಎರಡು ರಟ್ಟಿನ ಬಾಕ್ಸಗಳಲ್ಲಿ 192 ಬೆಂಗಳೂರು ಮಾಲ್ಟ ವಿಸ್ಕಿಯ ಪೌಚಗಳು ಇದ್ದವು. 192 ಬೆಂಗಳೂರು ಮಾಲ್ಟ ವಿಸ್ಕಿಯ ಪೌಚಗಳಿಂದ ಸ್ಯಾಂಪಲಗಾಗಿ ಪ್ರತಿಯೊಂದು ಪೌಚನಿಂದ ಸರಾಯಿ ತೆಗೆದಿರುವುದಿಲ್ಲಾ.

3) ಮುದ್ದೆ ಮಾಲು-1 ರಲ್ಲಿರುವ ಸಾರಾಯಿ ಪೌಚಗಳು ಕರ್ನಾಟಕ ಸರಕಾರದಿಂದ ನಮಗೆ ಬಂದಿರುತ್ತವೆ ಎಂದರೆ ಸರಿ. ಮುದ್ದೆ ಮಾಲು-1 ರಲ್ಲಿ ಸರಾಯಿ ಪೌಚಗಳು

MSIL ಅಂಗಡಿ ಹಾಗೂ ಪ್ರತಿಯೊಂದು ಸರಾಯಿ ಅಂಗಡಿಯಲ್ಲಿ ಲಭ್ಯ ಇರುತ್ತವೆ ಎಂದರೆ ಸರಿ. ಮುದ್ದೆ ಮಾಲು-1 ರಲ್ಲಿ ಇರುವ ಸಾರಾಯಿ ಪ್ಯಾಕೇಟ ಮೇಲೆ ಯಾವದೇ ರೀತಿಯ ಲೇಬಲ ಇರಲಿಲ್ಲಾ. ಆರೋಪಿ ಹಾಗೂ ಮುದ್ದೆ ಮಾಲು-1 ಕ್ಕೆ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಪಂಚರಿಗೆ ನೋಟಿಸು ಕೊಟ್ಟಿರುವುದಿಲ್ಲಾ. ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ:</u> ಏನು ಇಲ್ಲ**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**(ಶ್ರೀ. ಅಭಿನಯ)**
**C/c 2 ನೇ ಹೆ.ದಿ.&ನ್ಯಾ.ದಂ.,ಗೋಕಾಕ.**